ದಿನಾಂಕ: 23.08.2021 ರಂದು ಮಧ್ಯಾಹ್ನ 12.00 ಗಂಟೆಗೆ ಡಾ॥ ಕೇಶವಮೂರ್ತಿ.ಆರ್, ನಿರ್ದೇಶಕರು, ನೆಫ್ರೋ-ಯುರಾಲಜಿ ಸಂಸ್ಥೆ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಜರುಗಿದ ಟೆಂಡರ್ ಅಂಗೀಕರಿಸುವ ಸಮಿತಿ ಸಭೆಯ ನಡವಳಿಗಳು:

ಸಭೆಯಲ್ಲಿ ಹಾಜರಿದ್ದವರು:

| | | |
|---|---|---|
| 1) | ಡಾ॥ ಕೇಶವಮೂರ್ತಿ.ಆರ್<br>ನಿರ್ದೇಶಕರು,<br>ನೆಫ್ರೋ-ಯುರಾಲಜಿ ಸಂಸ್ಥೆ,<br>ಬೆಂಗಳೂರು. | ಅಧ್ಯಕ್ಷರು |
| 2) | ಡಾ॥ ಪ್ರದೀಪ್ ಎಂ.ಎಸ್.<br>ವೈದ್ಯಕೀಯ ಅಧೀಕ್ಷಕರು(ಪ್ರ),<br>ಪ್ರಾಧ್ಯಾಪಕರು ಹಾಗೂ<br>ವಿಭಾಗದ ಮುಖ್ಯಸ್ಥರು,<br>ಅರವಳಿಕೆಶಾಸ್ತ್ರ ವಿಭಾಗ,<br>ನೆಫ್ರೋ-ಯುರಾಲಜಿ ಸಂಸ್ಥೆ.<br>ಬೆಂಗಳೂರು. | ಸದಸ್ಯರು |
| 3) | ಡಾ॥ ಕುಮಾರಸ್ವಾಮಿ ಕೆ.ಎಂ.<br>ನಿರ್ದೇಶಕರ ಪರವಾಗಿ,<br>ವೈದ್ಯಕೀಯ ಶಿಕ್ಷಣ,<br>ಆನಂದ್‌ರಾವ್ ವೃತ್ತ,<br>ಬೆಂಗಳೂರು. | ಸದಸ್ಯರು |
| 4) | ಶ್ರೀ ಲೋಕೇಶ್. ಎನ್,<br>ಆಡಳಿತಾಧಿಕಾರಿಗಳು(ಪ್ರ),<br>ನೆಫ್ರೋ-ಯುರಾಲಜಿ ಸಂಸ್ಥೆ,<br>ಬೆಂಗಳೂರು. | ಸದಸ್ಯ ಕಾರ್ಯದರ್ಶಿಗಳು |
| 5) | ಡಾ॥ ಕೌಸಲ್ಯ. ಆರ್,<br>ಪ್ರಾಧ್ಯಾಪಕರು ಹಾಗೂ<br>ವಿಭಾಗದ ಮುಖ್ಯಸ್ಥರು,<br>ಬಯೋಕೆಮಿಸ್ಟ್ರಿ ವಿಭಾಗ,<br>ನೆಫ್ರೋ-ಯುರಾಲಜಿ ಸಂಸ್ಥೆ,<br>ಬೆಂಗಳೂರು. | ಸದಸ್ಯರು |

6) ಡಾ|| ಶಶಿಕಲಾ.ಎನ್ ಸದಸ್ಯರು

ಸಹ ಪ್ರಾಧ್ಯಾಪಕರು,
ಮೈಕ್ರೋಬಯಾಲಜಿ ವಿಭಾಗ,
(ವಿಭಾಗದ ಮುಖ್ಯಸ್ಥರ ಪರವಾಗಿ),
ನೆಫ್ರೋ-ಯುರಾಲಜಿ ಸಂಸ್ಥೆ,
ಬೆಂಗಳೂರು.

**ವಿಶೇಷ ಆಹ್ವಾನಿತರು:-**

7) ಡಾ|| ವಿಶ್ವನಾಥ್,
ಪ್ರಾಂಶುಪಾಲರು ಹಾಗೂ
ವಿಭಾಗದ ಮುಖ್ಯಸ್ಥರು,
ಬಯೋಕೆಮಿಸ್ಟ್ರಿ ವಿಭಾಗ,
ಬೆಂಗಳೂರು ವೈದ್ಯಕೀಯ ಕಾಲೇಜು
ಮತ್ತು ಸಂಶೋಧನಾ ಸಂಸ್ಥೆ,
ಬೆಂಗಳೂರು.

ಸದಸ್ಯ ಕಾರ್ಯದರ್ಶಿಗಳು ಅಧ್ಯಕ್ಷರನ್ನು ಹಾಗೂ ಸದಸ್ಯರನ್ನು ಸಭೆಗೆ ಆಹ್ವಾನಿಸಿ ಸಭೆಯನ್ನು ಜರುಗಿಸಲು ಕೋರಿದರು.

ಆಂತರಿಕ ಆರ್ಥಿಕ ಸಲಹೆಗಾರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು ಇವರು ಸಭೆಗೆ ಹಾಜರಾಗದೇ ಇರುವುದನ್ನು ಸಮಿತಿಯು ಗಮನಿಸಿತು.

- Medical Equipments under Public Private Partnership.

ದಿನಾಂಕ: 26.07.2021 ರಂದು ನಡೆದ ಟೆಂಡರ್ ಅಂಗೀಕರಿಸುವ ಸಮಿತಿ ಸಭೆಯ ನಡವಳಿ ಪ್ರಕಾರ ದಿನಾಂಕ: 28.07.2021 ರಂದು ದರಸಂಧಾನ ಸಮಿತಿಯು ದರಸಂಧಾನ ನಡೆಸಿ ಸಲ್ಲಿಸಿರುವ ವರದಿಯನ್ನು ಅಂಗೀಕರಿಸುವ ಬಗ್ಗೆ ಹಾಗೂ ದಿನಾಂಕ: 31.07.2021 ರಂದು ನಡೆದ ಟೆಂಡರ್ ಅಂಗೀಕರಿಸುವ ಸಮಿತಿ ಸಭೆಯ ನಡವಳಿ ಪ್ರಕಾರ ಮೆ|| ಇಂಪ್ಯಾಕ್ಟ್ ಲ್ಯಾಬೋರೇಟರಿ ಸಪ್ಲೈಯಿಸ್ ಮತ್ತು ಮೆ|| ರಾಘವ ಬಯೋ-ಮೆಡಿಕಲ್ಸ್ ಪ್ರೈ.ಲಿ., ಸಂಸ್ಥೆಯವರು L-1 ಟೆಂಡರ್‌ದಾರರಾದ ಮೆ|| ಬೆಂಗಳೂರು ಮೆಡಿಕಲ್ ಸಿಸ್ಟಂ ಸಂಸ್ಥೆಯವರು ಟೆಂಡರ್‌ನಲ್ಲಿ ನಮೂದಿಸಿರುವ ಉಪಕರಣದ ತಾಂತ್ರಿಕ ವಿವರಣೆಗೆ ಸಂಬಂಧಪಟ್ಟಂತೆ ಸಲ್ಲಿಸಿರುವ ಆಕ್ಷೇಪಣೆಗಳ ಬಗ್ಗೆ ಬಯೋಕೆಮಿಸ್ಟ್ರಿ ವಿಭಾಗದ ಮುಖ್ಯಸ್ಥರ ಅಭಿಪ್ರಾಯವನ್ನು

ಪಡೆದು ಮುಂದಿನ ಸಭೆಯಲ್ಲಿ ಚರ್ಚಿಸಿ ನಂತರ ಕ್ರಮ ಕೈಗೊಳ್ಳಲು ನಿರ್ಧರಿಸಲಾಯಿತು ಎಂದು ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ತಿಳಿಸಿದರು.

ಮೆ॥ ಇಂಪ್ಯಾಕ್ಟ್ ಲ್ಯಾಬೋರೇಟರಿ ಸಪ್ಲೈಯಿಸ್ ಸಂಸ್ಥೆಯವರು ಸಲ್ಲಿಸಿರುವ ಆಕ್ಷೇಪಣೆಗಳು ಈ ಕೆಳಕಂಡಂತಿವೆ.

**DEVIATION NO: 1**

1. (a) The tenderer should be a manufacturer who must have manufactured, tested and supplied the equipment (s) similar to the type specified in the „Schedule of Requirements" of the quantity required in any one of the last 80% of quantity required in any one of the last 3 years. The equipment"s offered for supply must be of the most recent series models incorporating the latest improvements in design. The models should have been released on or after 2010 and be in satisfactory operation for 24 months as on date of tender opening.

In this clause it's clearly mentioned that the Prospective Bidders has to quote Models should have been released on or after 2010. But following bidders has quoted following models which are release before 2010.

| SL. NO | BIDDERS NAME | COMPANY | MODEL | RELEASE YEAR |
|---|---|---|---|---|
| 1. | Raghava Biomedicals, Bangalore | ROCHE DIAGNOSTICS | COBAS 6000 | 2006 |
| 2. | Bangalore Medical Systems, Bangalore | ORTHO DIAGNOSTICS | VITROS@ 5600 | 2009 |

**DEVIATION NO: 2**

Section II Instruction to Tender clause no. 16 Submission of Bid

16.3 Further, no modification or withdrawal of Bid shall be allowed after the dead line. The Bids will be opened on the date & time noted in

"Notification Inviting Bids" at Director, I.N.U, BENGALURU. 19. Modification and Withdrawal of Tenders

19.1 The Tenderer may modify or withdraw its tender after the tender's submission, provided that written notice of the modification or withdrawal is received by the Purchaser prior to the deadline prescribed for submission of tenders.

19.2 The Tenderer's modification or withdrawal notice shall be prepared, sealed, marked and dispatched in accordance with the provisions of ITT Clause 16. A withdrawal notice may also be sent by telex or cable or fax but followed by a signed confirmation copy, post marked not later than the deadline for submission of tenders.

19.3 No tender may be modified subsequent to the deadline for submission of tenders.

ಸಮಿತಿಯು ಮೇಲ್ಕಂಡ ಆಕ್ಷೇಪಣೆಗಳನ್ನು ಪರಿಶೀಲಿಸಿತು. L-1 ಟೆಂಡರ್‌ದಾರರಾದ ಮೆ॥ ಬೆಂಗಳೂರು ಮೆಡಿಕಲ್ ಸಿಸ್ಟಂ ಸಂಸ್ಥೆಯವರು ಟೆಂಡರ್‌ನಲ್ಲಿ ನಮೂದಿಸಿರುವ ಉಪಕರಣವು 2010ಕ್ಕಂತ ಮುಂಚಿತವಾಗಿಯೇ ಮಾರುಕಟ್ಟೆಯಲ್ಲಿ ಚಾಲ್ತಿಯಲ್ಲಿರುವುದನ್ನು ಗಮನಿಸಲಾಯಿತು. ದಿನಾಂಕ:16.07.2021 ರಂದು ಜರುಗಿದ ಟೆಂಡರ್ ಆಹ್ವಾನ ಸಮಿತಿಯ ನಡವಳಿ ಪ್ರಕಾರ ಮೆ॥ ರಾಘವ ಬಯೋ-ಮೆಡಿಕಲ್ಸ್ ಪ್ರೈ.ಲಿ., ಮತ್ತು ಮೆ॥ ಬೆಂಗಳೂರು ಮೆಡಿಕಲ್ ಸಿಸ್ಟಂ ಸಂಸ್ಥೆಯವರು ಟೆಂಡರ್‌ನಲ್ಲಿ ನಮೂದಿಸಿರುವ ಉಪಕರಣವು 2010 ಕ್ಕಂತ ಮುಂಚಿತವಾಗಿಯೇ ಮಾರುಕಟ್ಟೆಯಲ್ಲಿ ಚಾಲ್ತಿಯಲ್ಲಿರುವುದರಿಂದ ಸದರಿ ಸಂಸ್ಥೆಯವರು ಪತ್ರ ಸಲ್ಲಿಸಿ ಪ್ರಸ್ತುತ ಮಾರುಕಟ್ಟೆಯಲ್ಲಿ ಚಾಲ್ತಿಯಲ್ಲಿರುವ ಉಪಕರಣವನ್ನು ನೀಡುವುದಾಗಿ ಹಾಗೂ ಅದನ್ನು ಪರಿಗಣಿಸಲು ಕೋರಿರುವುದರಿಂದ ಮೆ॥ ರಾಘವ ಬಯೋ-ಮೆಡಿಕಲ್ಸ್ ಪ್ರೈ.ಲಿ., ಮತ್ತು ಮೆ॥ ಬೆಂಗಳೂರು ಮೆಡಿಕಲ್ ಸಿಸ್ಟಂ ಸಂಸ್ಥೆಯವರ ಟೆಂಡರ್ ಅನ್ನು ತಾಂತ್ರಿಕವಾಗಿ ಪ್ರತಿಕ್ರೀಯಾಶೀಲ(Technically Responsive) ಎಂದು ಪರಿಗಣಿಸಿರುವುದನ್ನು ಸಹ ಗಮನಿಸಲಾಯಿತು.

ಬಯೋಕೆಮಿಸ್ಟ್ರಿ ವಿಭಾಗದ ಮುಖ್ಯಸ್ಥರು ಮೆ॥ ಇಂಪ್ಯಾಕ್ಟ್ ಲ್ಯಾಬೋರೇಟರಿ ಸಪ್ಲೈಯಿಸ್ ಮತ್ತು ಮೆ॥ ರಾಘವ ಬಯೋ-ಮೆಡಿಕಲ್ಸ್ ಪ್ರೈ.ಲಿ., ಸಂಸ್ಥೆಯವರು ತಾಂತ್ರಿಕ ವಿವರಣೆಗಳಿಗೆ ಸಲ್ಲಿಸಿರುವ ಆಕ್ಷೇಪಣೆಗಳಿಗೆ ನೀಡಿರುವ ವಿವರಣೆಯನ್ನು ಸಭೆಯಲ್ಲಿ ಮಂಡಿಸಲಾಯಿತು.

ಬಯೋಕೆಮಿಸ್ಟ್ರಿ ವಿಭಾಗದ ಮುಖ್ಯಸ್ಥರು ನೀಡಿರುವ ವಿವರಣೆಯನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು. ಡಾ॥ ಕುಮಾರಸ್ವಾಮಿ ಕೆ.ಎಂ, ನಿರ್ದೇಶಕರ ಪರವಾಗಿ, ವೈದ್ಯಕೀಯ ಶಿಕ್ಷಣ, ಆನಂದ್‌ರಾವ್ ವೃತ್ತ, ಬೆಂಗಳೂರು ಮತ್ತು ಡಾ॥ ವಿಶ್ವನಾಥ್, ಪ್ರಾಂಶುಪಾಲರು ಹಾಗೂ ವಿಭಾಗದ ಮುಖ್ಯಸ್ಥರು, ಬಯೋಕೆಮಿಸ್ಟ್ರಿ ವಿಭಾಗ, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇವರು ಟೆಂಡರ್ ದಾಖಲೆಯ ಪ್ರಕಾರ ಮೆ॥ ರಾಘವ ಬಯೋ-ಮೆಡಿಕಲ್ಸ್ ಪ್ರೈ.ಲಿ., ಮತ್ತು ಮೆ॥ ಬೆಂಗಳೂರು ಮೆಡಿಕಲ್ ಸಿಸ್ಟಂ ಸಂಸ್ಥೆಯವರು ಕವರ್-1 ದಾಖಲೆಗಳನ್ನು ತೆರೆದ ನಂತರ, ಟೆಂಡರ್‌ನಲ್ಲಿ ನಮೂದಿಸಿರುವ ಉಪಕರಣದ ಮಾದರಿಯನ್ನು(Model) ಹೊರತುಪಡಿಸಿ ಇದೇ ಉಪಕರಣದ ಮತ್ತೊಂದು ಮಾದರಿಯನ್ನು(Model) ನೀಡುವುದಾಗಿ ಸಲ್ಲಿಸಿರುವ ಮನವಿಯನ್ನು ಪರಿಗಣಿಸಿರುವುದು ಸೂಕ್ತವಲ್ಲ ಹಾಗೂ L-1 ಟೆಂಡರ್‌ದಾರರಾದ ಮೆ॥ ಬೆಂಗಳೂರು ಮೆಡಿಕಲ್ ಸಿಸ್ಟಂ ಸಂಸ್ಥೆಯವರು ಟೆಂಡರ್‌ನಲ್ಲಿ ನಮೂದಿಸಿರುವ ದರವು ಪ್ರಸ್ತುತ ಮಾರುಕಟ್ಟೆಯ ದರಕ್ಕಿಂತ ಅಧಿಕವಾಗಿರುವುದರಿಂದ ಮತ್ತು ಉಪಕರಣದ ತಾಂತ್ರಿಕ ವಿವರಣೆಯಲ್ಲಿ ಈ ಕೆಳಕಂಡ ನ್ಯೂನ್ಯತೆಗಳಿರುವುದರಿಂದ ಸದರಿ ಟೆಂಡರ್ ಅನ್ನು ಅಂಗೀಕರಿಸದೆ ಮರುಟೆಂಡರ್ ಆಹ್ವಾನಿಸುವುದು ಸೂಕ್ತವೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

| Sl. No. | Specification asper Tender Document | Deviations |
|---|---|---|
| 1. | 100% liquid ready to use | Dry Chemistry Concept of ORTHO DIAGNOSTICS not 100% liquid ready to use |
| 2. | Minimum 250 samples loading capacity at time with continuous loading facility, thereafter. | VITROS 7600 has 80 samples loading capacity at a time which is not asper the specification. |

ಚರ್ಚೆಯ ನಂತರ, ಟೆಂಡರ್ ದಾಖಲೆಯ ಪುಟ ಸಂಖ್ಯೆ 20 ರಲ್ಲಿ ನಮೂದಿಸಿರುವ ಕ್ರಮ ಸಂಖ್ಯೆ:

28. Purchaser's Right to Accept Any Tender and to Reject Any or All Tenders

28.1 The Purchaser reserves the right to accept or reject any tender, and to annul the tendering process and reject all tenders at any time prior to contract award, without thereby incurring any liability to the affected Tenderer or Tenderers ಷರತ್ತಿನ ಪ್ರಕಾರ ಟೆಂಡರ್ ಅಂಗೀಕರಿಸುವ ಪ್ರಾಧಿಕಾರಕ್ಕೆ ಯಾವ ಸಮಯದಲ್ಲಾದರೂ ಟೆಂಡರ್ ತಿರಸ್ಕರಿಸುವ ಅಧಿಕಾರವಿರುವುದರಿಂದ Medical Equipments under Public Private Partnership ಟೆಂಡರ್

ಅನ್ನು ಅಂಗೀಕರಿಸದೇ ತಿರಸ್ಕರಿಸಲು ಹಾಗೂ ತಾಂತ್ರಿಕ ವಿವರಣೆಯನ್ನು ಪರಿಷ್ಕರಿಸಿ ಮರುಟೆಂಡರ್ ಆಹ್ವಾನಿಸಲು ಸಮಿತಿಯು ತೀರ್ಮಾನಿಸಿತು.

ಮುಂದುವರೆದು, ಹಾಲಿ ಚಾಲ್ತಿಯಲ್ಲಿರುವ ಗುತ್ತಿಗೆಯ ಅವಧಿಯು ಮುಕ್ತಾಯಗೊಂಡಿರುವುದರಿಂದ ದಿನನಿತ್ಯ ರೋಗಿಗಳ ಪ್ರಯೋಗಾಲಯ ಪರೀಕ್ಷೆಗಳನ್ನು ನಡೆಸಲು ಅವಶ್ಯವಿರುವ ಪರಿಕರಗಳನ್ನು ಮರುಟೆಂಡರ್ ಆಹ್ವಾನಿಸಿ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೂ ಹಿಂದಿನ ಗುತ್ತಿಗೆಯಲ್ಲಿ ಖರೀದಿಸಲು ಸಮಿತಿಯು ತೀರ್ಮಾನಿಸಿತು.

ಸಭೆಯಲ್ಲಿ ಹಾಜರಿದ್ದವರಿಗೆ ವಂದನೆಗಳನ್ನು ಸಲ್ಲಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಡಾ|| ಪ್ರದೀಪ್ ಎಂ.ಎಸ್.
ವೈದ್ಯಕೀಯ ಅಧೀಕ್ಷಕರು(ಪ್ರ),
ನೆ.ಯು.ಸಂಸ್ಥೆ, ಬೆಂಗಳೂರು.

ಡಾ|| ಕುಮಾರಸ್ವಾಮಿ. ಕೆ.ಪಿ.
ಉಪನಿರ್ದೇಶಕರು,
ವೈದ್ಯಕೀಯ ಶಿಕ್ಷಣ,
ಆನಂದ್‌ರಾವ್ ವೃತ್ತ,
ಬೆಂಗಳೂರು.

ಶ್ರೀ ಲೋಕೇಶ್.ಎನ್,
ಸದಸ್ಯ ಕಾರ್ಯದರ್ಶಿಗಳು,
ಆಡಳಿತಾಧಿಕಾರಿಗಳು(ಪ್ರ),
ನೆ.ಯು.ಸಂಸ್ಥೆ, ಬೆಂಗಳೂರು.

ಡಾ|| ಕೌಸಲ್ಯ. ಆರ್
ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು,
ಬಯೋಕೆಮಿಸ್ಟ್ರಿ ವಿಭಾಗ,
ನೆ.ಯು.ಸಂಸ್ಥೆ, ಬೆಂಗಳೂರು.

ಡಾ|| ಶಶಿಕಲಾ.ಎನ್,
ಸಹ ಪ್ರಾಧ್ಯಾಪಕರು,
ಮೈಕ್ರೋಬಯಾಲಜಿ ವಿಭಾಗ,
(ವಿಭಾಗದ ಮುಖ್ಯಸ್ಥರ ಪರವಾಗಿ)
ನೆ.ಯು.ಸಂಸ್ಥೆ, ಬೆಂಗಳೂರು.

ಡಾ|| ವಿಶ್ವನಾಥ್,
ಪ್ರಾಂಶುಪಾಲರು ಹಾಗೂ ವಿಭಾಗದ ಮುಖ್ಯಸ್ಥರು,
ಬಯೋಕೆಮಿಸ್ಟ್ರಿ ವಿಭಾಗ, ಬೆಂಗಳೂರು ವೈದ್ಯಕೀಯ ಕಾಲೇಜು
ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು.

ಡಾ|| ಕೇಶವಮೂರ್ತಿ.ಆರ್
ಅಧ್ಯಕ್ಷರು, ಟೆಂಡರ್ ಅಂಗೀಕರಿಸುವ ಸಮಿತಿ ಹಾಗೂ,
ನಿರ್ದೇಶಕರು,
ನೆ.ಯು.ಸಂಸ್ಥೆ, ಬೆಂಗಳೂರು.